# ವಿದ್ಯಾರ್ಥಿಗಳಿಗೆ ದಯಾನಂದ ಅಗ್ಸರ್ ಸಲಹೆ

# ಮಹಾನ್ ಸಾಧಕರ ಮಾರ್ಗ ಅನುಸರಿಸಿ

• **ಕನ್ನಡಪ್ರಭ ವಾರ್ತೆ** ಆಳಂದ

ಜೀವನದಲ್ಲಿ ಉತ್ತಮವಾದ ಗುರಿ ಸಾಧಿಸಲು ವಿದ್ಯಾರ್ಥಿಗಳು ಮಹಾನ್ ಸಾಧಕರ ಮಾರ್ಗವನ್ನು ಅನುಸರಿಸಬೇಕು ಎಂದು ಕಲಬುರಗಿ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ದಯಾನಂದ ಅಗ್ಸರ್ ಹೇಳಿದರು.

ಎಸ್‌ಆರ್‌ಜಿಫೌಂಡೇಷನ್‌ಆಶ್ರಯದವೆಂಕಯ್ಯ ಕೂಸಯ್ಯ ಗುತ್ತೇದಾರ (ವಿಕೆಜಿ), ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಪ್ರಥಮ ವರ್ಷದವಿದ್ಯಾರ್ಥಿಗಳಸ್ವಾಗತಸಮಾರಂಭಮತ್ತು ಎನ್‌ಎಸ್‌ಎಸ್ ಚಟುವಟಿಕೆ ಹಾಗೂ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇಂದು ಶಿಕ್ಷಣ ಮತ್ತು ಜ್ಞಾನ ಎರಡು ಅಗತ್ಯವಾಗಿದೆ. ಒಳ್ಳೆಯನಡತೆ, ಸಂಸ್ಕಾರ, ಆದರ್ಶ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಪದವಿ ಹಂತದಲ್ಲಿ ಅವಕಾಶವಿದೆ. ಇದನ್ನುಸದ್ಬಳಕೆಮಾಡಿಕೊಳ್ಳಬೇಕು. ಗುರಿ ಸಾಧಿಸಲು ಯಾವ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬುದು ನಿರ್ಧರಿಸಿ ಕಠಿಣ ಪರಿಶ್ರಮ ನಿರಂತರ ಅಧ್ಯಯನದ ಮೂಲಕ ಉನ್ನತ ಸ್ಥಾನಕ್ಕೇರಬೇಕು ಎಂದರು.



ಆಳಂದ ಪಟ್ಟಣದ ವಿಕೆಜಿ ಪದವಿ ಮಹಾವಿದ್ಯಾಲಯ ವಿದ್ಯಾರ್ಥಿಗಳ ಸಮಾರಂಭದಲ್ಲಿ ಕಲಬುರಗಿ ವಿವಿ ಕುಲಸಚಿವ ಪ್ರೊ. ದಯಾನಂದ ಅಗ್ಸರ್ ಮಾತನಾಡಿದರು.

ಸಂಸ್ಥೆಯ ಅಧ್ಯಕ್ಷ, ಮಾಜಿ ಶಾಸಕ ಸುಭಾಷ ಗುತ್ತೇದಾರ, ಪ್ರಾಚಾರ್ಯ ಓಂಪ್ರಕಾಶ ರಾಜೋಳೆ, ಕಲ್ಯಾಣಿ ಎಸ್. ಸಾವಳಗಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಉದ್ಯಮಿ ಚಂದ್ರಕಾಂತ ವಿ. ಗುತ್ತೇದಾರ, ಸಂಸ್ಥೆಯ ಆಡಳಿತಾಧಿಕಾರಿ ರಾಘವೇಂದ್ರ ಚಿಂಚನಸೂರ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಕಾಲೇಜು ವಿಪಿ ಮಹೇಶ ಚಿಂಚನಸೂರ, ಕುಪೇಂದ್ರ ಗುತ್ತೇದಾರ, ಅಶೋಕ ಗುತ್ತೇದಾರ, ಪಾಲಕ ಪ್ರತಿನಿಧಿ ಮಹಾದೇವ ಬಂಡಾರಿ ಸೇರಿದಂತೆ ಇತರರು ಉಪಸ್ಥಿತರಿದ್ದರು. ಉಪನ್ಯಾಸಕಿ ಅನುಜಾ ಬೆಲಸೂರೆ ಸ್ವಾಗತಿಸಿದರು. ಖಂಡಪ್ಪಾ ವಗ್ಗೆ ಮತ್ತು ರಾಜಕುಮಾರ ಸುತಾರ ನಿರೂಪಿಸಿದರು. ಅಮಿತ ರಾಠೋಡ ವಂದಿಸಿದರು.

ಕನ್ನಡಪ್ರಭ
ಗುರುವಾರ 22.9.2016

REGISTRAR
GULBARGA UNIVERSITY
GULBARGA.